(ii) Some lands have already been granted for purposes of cultivation;

(iii) Rehabilitation of the people displaced by the Project has been taken up and facilities like wells, schools, roads, etc., are being provided, in order to facilitate the starting of irrigation of the lands immediately after water is supplied in the channel;

(iv) A Committee has been constituted to advice on all measures necessary for the speedy development of irrigation under the Project; and

(v) Soon after water is allowed for irrigation, the question of loans and supply of manure, etc., will be considered to create sufficient incentive for the ryots to bring their lands under cultivation.

Sri B. MADHAVACHAR.—Are the Government aware that while excavating the right bank channel, there has been some deviation in the alignment of the channel?

Sri H. M. CHANNABASAPPA.—There has been a change in the contour.

Sri B. MADHAVACHAR.—Will the Government be pleased to tell me the extra atchkat that will come under the new alignment?

Sri H. M. CHANNABASAPPA.—The area noted here is probably according to the original contour.

Sri B. MADHAVACHAR.—Will the Hon'ble Minister kindly verify and give the answer tomorrow at least?

Sri H. M. CHANNABASAPPA.—I will try to verify and give you the answer.

Sri B. MADHAVACHAR.—Will the Government spare exclusively one bulldozer for Bhadravathi taluk for use in the cultivation of these lands?

Mr. SPEAKER.—He is not the person that is concerned with that.

V. C. Arrears.

Q.—422. **Sri M. CHIKKALINGIAH** (Malavalli—Scheduled Castes).—

Will the Government be pleased to state:—

(*a*) the amount of V.C. arrears collected in Mandya District during 1955-56 (up-to-date);

(*b*) the amount of remuneration paid to village officers, *viz.*, Patels and Shanbhogues (separate figures);

(*c*) the amount paid to Thotis and Tfialaris?

A.—**Sri A. G. RAMACHANDRA RAO** (Minister for Law and Education).—

(*a*) Rs. 13,63,664-9-11 (up to the end of January 1956).

(*b*) Nil. The remuneration to the village officers for the current year falls due in the month of June 1956.

(*c*) Nil. No amount is payble to them on this account.

ಶ್ರೀ ಎಂ. ಚಿಕ್ಕಲಿಂಗಯ್ಯ.—ತಾವು (ಬ) ಪ್ರಶ್ನೆಗೆ ಉತ್ತರವಾಗಿ ಹೇಳಿರತಕ್ಕ ವಿಷಯದಲ್ಲಿ ಪಟೇಲ್ ಶಾನುಭೋಗರುಗಳಿಗೆ ಕೊಡತಕ್ಕ ರೇಟ್ ಆಫ್ ಕಮಿಷನ್ ಎಷ್ಟಾಗುತ್ತದೆ ಎನ್ನುವುದನ್ನು ಹೇಳುವುದ ಕ್ಕಾಗುತ್ತದೆಯೇ?

*ಶ್ರೀ ಎ. ಜಿ. ರಾಮಚಂದ್ರರಾವ್.—ಅದನ್ನು ವಿಚಾರ ಮಾಡಿ ಹೇಳುತ್ತೇನೆ.

ಶ್ರೀ ಎಂ. ಚಿಕ್ಕಲಿಂಗಯ್ಯ.—ತಾವು (ಸಿ) ಪ್ರಶ್ನೆಗೆ ಒದಗಿಸಿರುವ ಉತ್ತರಕ್ಕನುಸಾರವಾಗಿ ಅವರು ಅಲ್ಲಿ ಕೆಲಸಗಳನ್ನೇನೂ ಮಾಡುತ್ತಿಲ್ಲವೆಂಬುದು ತಮ್ಮ ಭಾವನೆಯೋ?

ಶ್ರೀ ಎ. ಜಿ. ರಾಮಚಂದ್ರರಾವ್.—ಅವರಿಗೆ ಕೆಲಸಕ್ಕಾಗಿ ಜಮೀನುಗಳನ್ನು ಗುಂಬಳಿಯಾಗಿ ಕೊಟ್ಟಿದ್ದೇವೆ. ಅದಕ್ಕಾಗಿ ಅವರಿಗೆ ಹಣದ ರೂಪವಾಗೇನೂ ಕೊಡಬೇಕಾದ್ದಿಲ್ಲ. ಆದರೆ ಪಟೇಲ್ ಶ್ಯಾನುಭೋಗ ರುಗಳಿಗೆ ಈ ರೀತಿ ಯಾವ ಜಮೀನನ್ನೂ ಈ ಕೆಲಸದ ಬಗ್ಗೆ ಕೊಟ್ಟಿಲ್ಲ.

ಶ್ರೀ ಎಂ. ಚಿಕ್ಕಲಿಂಗಯ್ಯ.—ಗ್ರಾಮಾಧಿಕಾರಿ ಗಳಾದ ಪಟೇಲ್ ಶಾನುಭೋಗರುಗಳಿಗೆ ಪೋಟಿಗೆ ಕೊಡಲು ಅವರಿಗೆ ಮಾತ್ರ ಕೆಲಸವಿದೆ. ಆದರೆ ವಿಲೇಜ್ ಮ್ಯಾನ್ಯುಯಲ್ ಆಕ್ಟ್‌ನ 87-88ನೇ ಕಲು ಮುಗಳ ರೀತ್ಯ ಈ ತೋಟಿ-ತಳಾರಿಗಳಿಂದ ಯಾವ ಕೆಲಸವನ್ನೂ ಯಾವ ಪ್ರತಿಫಲವನ್ನೂ ಕೊಡದೆ ತೆಗೆದುಕೊಳ್ಳಕೂಡದೆಂದು ನಿಯಮವಿಲ್ಲವೇ?

ಶ್ರೀ ಎ. ಜಿ. ರಾಮಚಂದ್ರರಾವ್.—ಹೌದು, ಇದೆ.

ಶ್ರೀ ಎಂ. ಚಿಕ್ಕಲಿಂಗಯ್ಯ.—ಈ ದಿವಸ ಗ್ರಾಮ ಗಳಲ್ಲಿ ಹಗಲು ಹಣವನ್ನು ವಸೂಲು ಮಾಡತಕ್ಕ ಪಟೇಲ್ ಶಾನುಭೋಗರುಗಳಿಗೆ ಪೋಟಿಗೆ ಕೊಟ್ಟು, ಹಗಲೂ ರಾತ್ರಿ ದುಡಿಯುತ್ತಿರುವಂಥಾ ಈ ತೋಟಿ ತಳಾರಿಗಳಿಗೆ ಯಾವ ಸಂಭಾವನೆಯನ್ನೂ ಕೊಡಬೇ ಕಾಗಿಲ್ಲ ಎಂದು ಹೇಳುವುದು ನ್ಯಾಯವೋ, ಅನ್ಯಾಯವೋ?

ಶ್ರೀ ಎ. ಜಿ. ರಾಮಚಂದ್ರರಾವ್.—ಈಗ ನಾವು ತೋಟಿ ತಳಾರಿಗಳಿಗೆ ಕೊಡುತ್ತಿರುವುದು ಸರಿ ಯಾಗಿದೆ.

ಶ್ರೀ ಎಂ. ಚಿಕ್ಕಲಿಂಗಯ್ಯ.—ತಾವು ಈ ದಿವಸ ಅವರಿಗೆ ಕೊಡುತ್ತಿರುವ ವಿಚಾರಕ್ಕೂ, ಈ ಕೆಲಸಕ್ಕೂ ಸಂಬಂಧವಿಲ್ಲ. ಪಟೇಲ್-ಶಾನುಭೋಗರುಗಳಿಗೆ ಕಮಿಷ್ ಕೊಡುತ್ತಿರುವಂತೆ ಈ ತೋಟಿ-ತಳಾರಿಗಳಿಗೂ ಕಮಿಷ್ ಕೊಡಲು ತಮಗೇನು ಕಷ್ಟವಿದೆ ?

ಶ್ರೀ ಎ. ಜಿ. ರಾಮಚಂದ್ರರಾವ್.—ಆಗಲಿ. ಈ ವಿಚಾರವನ್ನು ಮತ್ತೊಮ್ಮೆ ಪರಿಶೀಲನೆ ಮಾಡಲಾಗುತ್ತದೆ.

ಶ್ರೀ ಬಿ. ಪಿ. ನಾಗರಾಜಮೂರ್ತಿ.—ಈಗ ತಾವು ವಸೂಲ್ಮಾಡಿರತಕ್ಕ ಮೊಬಲಗಿನಲ್ಲಿ ಅನರೆಷ್ಟು, ಬಡ್ಡಿ ಎಷ್ಟು ಎಂಬುದನ್ನು ತಿಳಿಸುತ್ತೀರಾ ?

ಶ್ರೀ ಎ. ಜಿ. ರಾಮಚಂದ್ರರಾವ್.—ಅದನ್ನು ವಿಚಾರ ಮಾಡಿ ಹೇಳುತ್ತೇನೆ.

ಶ್ರೀ ಬಿ. ಪಿ. ನಾಗರಾಜಮೂರ್ತಿ.—ಅನಲು ಮೊಬಲಗಿಗಿಂತಲೂ ಬಡ್ಡಿಯೇ ಜಾಸ್ತಿ ಆಗಿದೆ ಎನ್ನುವುದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಎ. ಜಿ. ರಾಮಚಂದ್ರರಾವ್.—ಆ ವಿಚಾರ ಸರ್ಕಾರದವರ ಗಮನಕ್ಕೆ ಬಂದಿದೆ.

Sri P. M. SWAMIDURAI.—With regard to clause (*c*), will the Government be pleased to change the designation of Thotis and Thalaris ?

Mr. SPEAKER.—This question is about remuneration only.

ಶ್ರೀ ಬಿ. ರಾಚಯ್ಯ.—ಕನ್ನಂಬಾಡಿ ಕಟ್ಟೆ ಕಟ್ಟಿ ಎಷ್ಟೋ ವರ್ಷಗಳಾಯಿತು. ಆದಾಗ್ಯೂ ಹೀಗೆ 13-14 ಲಕ್ಷ ರೂಪಾಯಿಗಳ ಬಾಕಿ ನಿಲ್ಲಲು ಕಾರಣವೇನು ?

ಶ್ರೀ ಎ. ಜಿ. ರಾಮಚಂದ್ರರಾವ್.—ಅನೇಕ ವರ್ಷಗಳಿಂದಲೂ ಅದು ಹಾಗೇ ಉಳಿಯುತ್ತಾ ಬಂತು. ಅದಕ್ಕಾಗಿ ಆ ಬಾಕಿ ಏರಿಕೊಂಡಿದೆ.

ಶ್ರೀ ಬಿ. ರಾಚಯ್ಯ.—ಈಗಲಾದರೂ ಆ ಇಲಾಖೆಯ ಅಧಿಕಾರಿಗಳು ನೂಕ್ ಕಾರ್ಯಕ್ರಮಗಳನ್ನೆಲ್ಲಾ ಎಂದರೆ, ಜಪ್ತಿ, ಹರಾಜ್ ಇತ್ಯಾದಿಗಳ ಮೂಲಕ ಬಾಕಿ ವಸೂಲು ಮಾಡಲು ಪ್ರಯತ್ನಪಡುತ್ತಿದ್ದಾರೆಯೇ ?

ಶ್ರೀ ಎ. ಜಿ. ರಾಮಚಂದ್ರರಾವ್.—ಈಗ ಆ ಎಲ್ಲ ಕ್ರಮಗಳನ್ನೂ ಕೈಗೊಳ್ಳಲಾಗಿದೆ. ಅವುಗಳನ್ನು ಜಾರಿಗೆ ಕೊಡಲಾಗುತ್ತಿದೆ.

ಶ್ರೀ ಬಿ. ರಾಚಯ್ಯ.—ಈಗ ಬಾಕಿ ನಿಂತಿರುವ ಕಾಂಟ್ರಿಬ್ಯೂಷ್ ಮೊಬಲಗನ್ನು ಕಡ್ಡಾಯವಾಗಿ ವಸೂಲ್ಮಾಡಲು ಪ್ರಯತ್ನ ಮಾಡುತ್ತಿದ್ದೀರಾ ?

ಶ್ರೀ ಎ. ಜಿ. ರಾಮಚಂದ್ರರಾವ್.—ಮಾಡುತ್ತಿದ್ದೇವೆ. ಇದಕ್ಕಾಗಿ ಒಂದು ಸ್ಪೆಷಲ್ ಸಬ್-ಡಿವಿಜನ್ನನ್ನೇ ತೆರೆಯಲಾಗಿದೆ.

ಶ್ರೀ ಜಿ. ಎಸ್. ಬೊಮ್ಮೇಗೌಡ.—ಈ ದಿವಸ ಅಲ್ಲಿ ವಸೂಲ್ಮಾಡಿರತಕ್ಕ ಬಾಕಿಗಳ ಬಗ್ಗೆ ಲೆಕ್ಕವೇ ಸರಿಯಾಗಿ ಮೊಕಾಬಲೆಯಾಗದೆ ಯಾರ್ಯಾರು ಎಷ್ಟೆಷ್ಟು ಬಾಕಿ ಕೊಟ್ಟಿದ್ದಾರೆ, ಇನ್ನು ಕೊಡಬೇಕಾದ ಬಾಕಿ ಎಷ್ಟು ಎಂಬ ಬಗ್ಗೆ ಹಾಲ ಲೆಕ್ಕ ನವುಜಾಯಿಷೆ ಇಲ್ಲದೆ ಇರುವುದರಿಂದ ತಾನೆ ಹೀಗೆ ಬಾಕಿ ನಿಲ್ಲಲು ಅವಕಾಶವಾದದ್ದು ?

ಶ್ರೀ ಎ. ಜಿ. ರಾಮಚಂದ್ರರಾವ್.—ಅಂಥ ಪ್ರಸಂಗಗಳೂ ಕೆಲವಿವೆ.

ಶ್ರೀ ಎಕ್. ಹುಚ್ಚಮಾಸ್ತಿಗೌಡ.—ಈ ಸ್ಪೆಷಲ್ ಸಿಬ್ಬಂದಿಗಾಗಿ ತಾವು ಖರ್ಚು ಮಾಡುತ್ತಿರುವ ಹಣ ಎಷ್ಟು ?

ಶ್ರೀ ಎ. ಜಿ. ರಾಮಚಂದ್ರರಾವ್.—ಅಲ್ಲಿ ಎರಡು ಸಬ್-ಡಿವಿಜನ್‌ಗಳಿವೆ. ಆ ವಿಚಾರ ಕರಾರುವಾಕ್ಕಾಗಿ ಗೊತ್ತಿಲ್ಲ. ವಿಚಾರ ಮಾಡಿ ಹೇಳುತ್ತೇನೆ.

Gomal of Yaraganahalli and Yanagumba Villages, Chamarajanagar Taluk.

Q.—541. Sri U. M. MADAPPA (Chamarajanagar).—

Will the Government be pleased to state :—

(*a*) whether it has come to their notice that the gomal of Yaraganahalli and Yanagumba villages in Chamarajanagar Taluk is not sufficient for the cattle of these villages ;

(*b*) whether it is true that the gomal is not sufficient because the forest authorities of Bandipur have encroached upon the gomal land of these villages ;

(*c*) whether they have received any representations in the matter from the raiyats ;

(*d*) if so, the action taken by the Government in the matter ?

A.—Sri A. G. RAMACHANDRA RAO (Minister for Law and Education).—

(*a*) Yes.

(*b*) There is no encroachment. A forest has been constituted as per Forest Manual.

(*c*) No.

(*d*) Does not arise in view of answer to (*c*).

ಶ್ರೀ ಯು. ಎಂ. ಮಾದಪ್ಪ.—15, 16 ಮತ್ತು 17ನೆಯ ನರ್ವೆನಂಬರುಗಳ ಜಮೀನುಗಳಲ್ಲರತಕ್ಕ ಗೋಮಾಳ ಪ್ರದೇಶದಲ್ಲಿ ಹುಲ್ಲುಬನ್ನಿ, ಖೇತ್‌ವಾರು ಮತ್ತು ನಕಾಶೆ ಇತ್ಯಾದಿಗಳೆಲ್ಲಾ ಸೇರಿದ್ದಾಗ್ಯೂ ಆ ಪ್ರದೇಶವನ್ನು ಅರಣ್ಯ ಇಲಾಖೆಯವರು ಹೇಗೆ ಅನುಭವಿಸುತ್ತಿದ್ದಾರೆ ?

*ಶ್ರೀ ಎ. ಜಿ. ರಾಮಚಂದ್ರರಾವ್.—ತಾವು ಒತ್ತುವರಿ ವಿಚಾರ ಕೇಳಿದ್ದೀರಿ. ಹಾಗೆ ಒತ್ತುವರಿ ಆಗಿಲ್ಲ ಎಂದು ನಾವು ಉತ್ತರ ಕೊಟ್ಟಿದ್ದೇವೆ.